**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**

**ದಿಃ 30.08.2025 ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ**

2022 ರಲ್ಲಿ ದಾವಾ ಆಸ್ತಿಗೆ ಬಾಡಿಗೆದಾರರಾಗಿ ಬಂದಿದ್ದೇನೆ. ಬಾಡಿಗೆಯ ವಿವರಗಳನ್ನು ಚಾ.ಸ.1 ರವರೊಂದಿಗೆ ಚರ್ಚಿಸಿದ್ದೆ. ಮುಂಗಡ ಹಣ, ಬಾಡಿಗೆ ಮೊತ್ತವನ್ನು ಅವರಿಗೆ ನೀಡಿದ್ದೆ. ನನ್ನ ಪ್ರಕಾರ ಚಾ.ಸ.1 ರವರೇ ದಾವಾ ಆಸ್ತಿಯ ಮಾಲೀಕರು ಎಂದು ತಿಳಿದುಕೊಂಡಿದ್ದೇನೆ. ಅನಿತಾರವರು ದಾವಾ ಆಸ್ತಿಯ ಮಾಲೀಕರು, ಚಾ.ಸ.1 ರವರು ಅವರು ಮುಖ್ತೆರ್ನಾಮೆ ಎಂದರೆ ಸಾಕ್ಷಿ, ಅನಿತಾರವರು ಯಾರು ಎಂದು ಗೊತ್ತಿಲ್ಲ ಎನ್ನುತ್ತಾರೆ. ನಿಪಿ.3 ನನಗೆ ಜಾರಿಯಾಗಿದೆ. ವಾದಿಗೆ ದಾವಾ ಆಸ್ತಿಯ ಅವಶ್ಯಕತೆ ಇರುವ ಕಾರಣ, ದಾವಾ ಆಸ್ತಿಯನ್ನು ಖಾಲಿ ಮಾಡಿ ಎಂದು ನೊಟಿಸ ನೀಡಿದ್ದರು, ಎಂದರೆ ಸಾಕ್ಷಿ ಚಾ.ಸ.1 ರವರು ಸದರಿ ವಿಚಾರವನ್ನು ತಿಳಿಸಿದ್ದರು ಎನ್ನುತ್ತಾರೆ. ನಿಪಿ.3 ಕ್ಕೆ ಉತ್ತರದ ನೊಟಿಸ ನೀಡಿಲ್ಲ. ದಾವಾ ಆಸ್ತಿಯನ್ನು ಚಾ.ಸ.1 ರವರಿಗೆ ಹಸ್ತಾಂತರಿಸಿ ಬಾಕಿ ಬಾಡಿಗೆ ಪಾವತಿಸಲು ಕಾಲಾವಕಾಶ ಬೇಕು ಎನ್ನುತ್ತಾರೆ. ಚಾ.ಸ.1 ರವರ ಮಗಳು ಬಾಡಿಗೆ ಹಣ ಕೇಳಿಲ್ಲ. ಬಾಡಿಗೆ ಪಾವತಿಸಲು ಅನಿತಾರವರು ಯಾವುದೆ ಅಡ್ಡಿ ಮಾಡಿಲ್ಲ. ನೀವು ಬಾಡಿಗೆ ಹಣ ಪಾವತಿಸದೆ ದಾವಾ ಆಸ್ತಿಯನ್ನು ಹಸ್ತಾಂತರಿಸದೆ ತೊಂದರೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,
ಮೇಯೋಹಾಲ್ ವಿಭಾಗ, ಬೆಂಗಳೂರು.